# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
# ನ್ಯಾಯಾಲಯ, ಶೋರಾಪುರ.

## ಅಪರಾಧಿಕ ಪ್ರಕರಣ ಸಂಖ್ಯೆ 510/2025

ಫಿರ್ಯಾದಿದಾರರು: ಸರ್ಕಾರದ ಪರ ಕೆಂಭಾವಿ ಪೊಲೀಸ್ ಠಾಣೆ.

**:: ವಿರುದ್ಧ ::**

ಆರೋಪಿತರು: 1. ನಾನಗೌಡ ತಂದೆ ಸುಬಣ್ಣಗೌಡ ಮಾಲಿ ಬಿರಾದಾರ,
ವಯಸ್ಸು: 24 ವರ್ಷ, ಉ: ಕೂಲಿ,
ಸಾ: ಗೌಡಗೇರ, ತಾ: ಸುರಪುರ.

## ದೋಷಾರೋಪಣೆ ::

ನಾನು ಫಕ್ಕೀರವ್ವ ಕೆಳಗೇರಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶೋರಾಪೂರ ಆರೋಪಿತರಾದ ನಿಮಗೆ ಈ ಕೆಳಗಿನ ರೀತಿ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕ 11.12.2024 ರಂದು ಬೆಳಗ್ಗೆ 7.00 ಗಂಟೆಗೆ ಕೆಂಭಾವಿ ಪೋಲೀಸ ಠಾಣೆಯ ವ್ಯಾಪ್ತಿಯಲಿ ಬರುವ ಗೌಡಗೇರಿ ಗ್ರಾಮದ ಕೆಂಚಮ್ಮ ದೇವರ ಗುಡಿಯ ಮುಂದೆ ಚಾಸಾ-1 ರವರು ಕುಳಿತ್ತಿದ್ದಾಗ ಈ ಕೇಸಿನ ಆರೋಪಿತನಾದ ನೀನು ಚಾಸಾ 1 ರವರಿಗೆ ಚಾಸಾ-1 ರವರಿಗೆ ಕೈ ಹಿಡಿದು ಜಗ್ಗಿ ಎಡಗೈ ತಿರುವಿ ಕೆಳಗೆ ಕೆಡವಿ ಕಾಲಿನಿಂದ ಕುತ್ತಿಗೆಯ ಮೇಲೆ ಒದ್ದು ಒಳಪೆಟ್ಟು ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ.115(2)ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಅಲ್ಲಯೇ ಬಿದಿದ್ದ ಕಲ್ಲಿನ್ನು ತೆಗೆದುಕೊಂಡು ಚಾಸಾ-1 ರವರ ಹೊಟ್ಟೆಯ ಮೇಲೆ ಹೊಡೆದು ಒಳಪೆಟ್ಟು ಮಾಡಿದ್ದು, ಹೊಡೆದು ರಕ್ತಗಾಯ ಮಾಡಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ.118(1) ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನಾದ ನೀನು ಚಾಸಾ 1 ರವರ ಜೊತೆ ಜಗಳ ತೆಗೆದುಯುವ ಸಲುವಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾ.ನ್ಯಾ.ಸಂ. ಕಲಂ.352ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಚಾಸಾ 1 ರವರಿಗೆ ಜೀವ ಬೇದರಿಕೆ ಹಾಕಿದ್ದು, ಆ ಮೂಲಕ ಭಾ.ನ್ಯಾ.ಸಂ.ಕಲಂ.351(2) ರ ಅಡಿಯಲ್ಲಿ ಅಪರಾಧ ಎಸಗಿದ್ದಿರೆಂದು ನಿಮ್ಮ ವಿರುದ್ಧ ಆರೋಪಿಸಲಾಗಿದೆ ಹಾಗೂ ನಿವೆಲ್ಲರೂ ಮೇಲಿನ ಅಪರಾಧಗಳಿಗಾಗಿ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

ಪ್ರ ಃ ನಿಮಗೆ ಮೇಲಿನ ಹೇಳಿಕೆಯನ್ನು ಓದಿ ತಿಳಿಸಿ ಹೇಳಿದ್ದು ನಿಮಗೆ ಅರ್ಥವಾಯಿತಾ?

ಉಸತ್ತರ ಃ

ಪ್ರ ಃ ನೀವು ಮೇಲಿನ ಹೇಳಿಕೆಯನ್ನು ಓಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರೊ ?

ಉತ್ತರ ಃ

(ಮೇಲಿನ ಹೇಳಿಕೆಯನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ತಿಳಿಸಿ ಹೇಳಿ ಅವರು ಉತ್ತರಿಸಿದ ಭಾಷೆಯಲ್ಲಿ ಅವರ ಉತ್ತರಗಳನ್ನು ಬರೆಯಲಾಯಿತು ಎಂದು ಧೃಡಿಕರಿಸಿದೆ).

ದಿನಾಂಕ ಃ 13.10.2025

(ಫಕ್ಕೀರವ್ವ ಕೆಳಗೇರಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಶೋರಾಪುರ.